24/12/2016

# ಎಚ್ಎಎಲ್: ಸೌರ ಯೋಜನೆಗೆ ಚಾಲನೆ



**ಬೆಂಗಳೂರು:** ನಗರದ ಎಚ್ಎಎಲ್ ವಿಮಾನ ನಿಲ್ದಾಣದಲ್ಲಿ3.5 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗೆ ಎಚ್ಎಎಲ್‌ನ ಸಿಎಂಡಿ ಟಿ.ಸುವರ್ಣ ರಾಜು ಅವರು ಚಾಲನೆ ನೀಡಿದರು. ಎಚ್ಎಎಲ್‌ನ ಸಂಸ್ಥಾಪನಾ ದಿನದಂದೇ ಉದ್ಘಾಟನೆ ನಡೆದಿದ್ದು, 22 ಎಕರೆಗಳಲ್ಲಿ ಯೋಜನೆ ಹರಡಿಗೊಂಡಿದ್ದು 12,985 ಸೌರ ಘಟಕಗಳನ್ನು ಸ್ಥಾಪಿಸಲಾಗಿದೆ.

''ಇದು ಸಿಂಗಲ್-ಆ್ಯಕ್ಸಿಸ್ ಟ್ರ್ಯಾಕರ್ ಆಧರಿತ ಸೌರಘಟಕಗಳನ್ನು ಉಳ್ಳ ಈ ಪರಿಸರ ಸ್ನೇಹಿ ಕಾರ್ಯಕ್ರಮದ ಒಂದು ಭಾಗವಾಗುತ್ತಿರುವುದಕ್ಕೆ ಸಂತೋಷವಾಗುತ್ತಿದೆ. ವಿದ್ಯುತ್ ಬೇಡಿಕೆ ಈಡೇರಿಕೆಗೆ ಯೋಜನೆ ಪೂರಕವಾಗಲಿದೆ. ಸೌರ ವಿದ್ಯುತ್‌ನಿಂದಾಗಿ ನಮ್ಮ ವಿದ್ಯುತ್ ಅವಲಂಬನೆ ಗಣನೀಯವಾಗಿ ತಗ್ಗಲಿದೆ,'' ಎಂದು ಸುವರ್ಣರಾಜು ಹೇಳಿದರು. ಎಇಎಸ್ ಸಿಇಒ ಸಂಜೀವ್ ಅಗರವಾಲ್ ಈ ಸಂದರ್ಭದಲ್ಲಿ ಮಾತನಾಡಿದರು.

24/12/16, Pg 6 Vijayavani

# ಮರದ ರೆಂಬೆ ತೆರವುಗೊಳಿಸುತ್ತಿದ್ದಾಗ ವಿದ್ಯುತ್ ಸ್ಪರ್ಶಿಸಿ ಮುಖ್ಯ ಶಿಕ್ಷಕ ಸಾವು

**ಚಾಮರಾಜನಗರ:** ತಾಲೂಕಿನ ಕರಳ ಮೋಳೆ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶಿಸಿ ಮುಖ್ಯ ಶಿಕ್ಷಕರೊಬ್ಬರು ಮೃತಪಟ್ಟಿದ್ದಾರೆ. ಜ್ಯೋತಿಗೌಡನಪುರದ ವಾಸಿ, ಕರಳಘಿಮೋಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮರಿಸ್ವಾಮಿ (50) ಮೃತರು.

ಮರಿಸ್ವಾಮಿ ಅವರು ಎಂದಿನಂತೆ ಶುಕ್ರವಾರವೂ ಶಾಲೆಗೆ ಹಾಜರಾಗಿದ್ದರು. ಶಾಲೆಯ ಕಾಂಪೌಂಡ್ ಬಳಿ ಹಾದುಹೋಗಿದ್ದ ವಿದ್ಯುತ್ ತಂತಿಗೆ ಗಸೆಗಸೆ ಮರದ ರೆಂಬೆ ಸ್ಪರ್ಶಿಸುತ್ತಿದ್ದನ್ನು ತೆರವು ಮಾಡಲು ಮುಂದಾಗಿದ್ದರು. ಮಧ್ಯಾಹ್ನ ಅವರು ಮರವೇರಿ ರೆಂಬೆ ಕಟಾವು ಮಾಡಿದಾಗ ವಿದ್ಯುತ್ ತಂತಿ ಮೇಲೆ ಬಿದ್ದಿದೆ. ರೆಂಬೆ ಮೂಲಕ ಮುಖ್ಯ ಶಿಕ್ಷಕರಿಗೆ ವಿದ್ಯುತ್ ಪ್ರವಹಿಸಿದಾಗ ಕಿರುಚಾಡಿದ್ದಾರೆ. ಸ್ಥಳದಲ್ಲಿದ್ದ ಸಹ ಶಿಕ್ಷಕರು ನೋಡುವಷ್ಟರಲ್ಲಿ ಮರಿಸ್ವಾಮಿ ಮೃತಪಟ್ಟಿದ್ದರು. ಶಿಕ್ಷಕರು ಸೆಸ್ಕ್ ಇಂಜಿನಿಯರ್‌ಗಳಿಗೆ ಕರೆ ಮಾಡಿ ವಿಷಯ ಮುಟ್ಟಿಸಿದಾಗ ಅವರು ಲೈನ್‌ನಲ್ಲಿ ವಿದ್ಯುತ್ ಸ್ಥಗಿತ ಗೊಳಿಸಿದರು. ಶಾಲೆ ಮುಂಭಾಗ ಹಾದುಹೋಗಿದ್ದ ವಿದ್ಯುತ್ ಲೈನ್ ಇತ್ತೀಚೆಗೆ ನಿರಂತರ ಜ್ಯೋತಿ ಲೈನ್ ಆಗಿ ಪರಿವರ್ತನೆ ಹೊಂದಿತ್ತು. ಸೆಸ್ಕ್ ಅಧಿಕಾರಿಗಳು ಈ ಹಿಂದೆಯೇ ಲೈನ್‌ಗೆ ಸ್ಪರ್ಶಿಸುತ್ತಿದ್ದ ಗಸೆಗಸೆ ಮರದ ಕೆಲವು ಕೊಂಬೆಗಳನ್ನು ಕಟಾವು ಮಾಡಿದ್ದರು. ಬಳಿಕ ರೆಂಬೆಗಳು ಚಿಗುರಿ ಲೈನ್‌ಗೆ ಸ್ಪರ್ಶಿಸುವ ಹಂತಕ್ಕೆ ಬೆಳೆದಿದ್ದವು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಪಂ ಸದಸ್ಯ ಆರ್.ಬಾಲರಾಜು ಆಸ್ಪತ್ರೆಗೆ ಆಗಮಿಸಿ ಮೃತರ ಸಂಬಂಧಿಕರಿಗೆ ಸಾಂತ್ವನ ಹೇಳಿದರು. ರಾಮಸಮುದ್ರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ವಿಜಯವಾಣಿ ಚಿತ್ರ

## ವಿದ್ಯುತ್ ಸ್ಪರ್ಶ, ಶಿಕ್ಷಕ ಸಾವು

**ಚಾಮರಾಜನಗರ:** ಕರಳಮೋಳೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಮರಿಸ್ವಾಮಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದಾರೆ. ಶಾಲೆ ಆವರಣದಲ್ಲಿ ಬೆಳೆದಿದ್ದ ಗಸಗಸೆ ಮರ ವಿದ್ಯುತ್ ವೈರ್‌ಗೆ ತಗಲುತ್ತದೆ ಎಂದು ರೆಂಬೆಗಳನ್ನು ಕಟಾವು ಮಾಡಲು ಹೋದಾಗ ಈ ದುರಂತ ಸಂಭವಿಸಿದೆ.

**ವಿಕ ಅಭಿಮತ**

ಬಿಪಿಎಲ್ ಕಾರ್ಡ್‌ದಾರರಿಗೆ ಪಡಿತರದ ಬದಲು ನಗದು ಕೂಪನ್ ನೀಡುವ ರಾಜ್ಯ ಸರಕಾರದ ನಿರ್ಧಾರ ಸ್ವಾಗತಾರ್ಹವೇ?

33% ಹೌದು

67% ಇಲ್ಲ

24/12/16 Pg No 3B

## ವಿದ್ಯುತ್ ಸ್ಪರ್ಶ: ಮುಖ್ಯಶಿಕ್ಷಕ ಸಾವು

ಚಾಮರಾಜನಗರ: ಶಾಲೆಯ ಮುಂಭಾಗದಲ್ಲಿದ್ದ ಮರದ ಕೊಂಬೆ ಕತ್ತರಿಸಲು ಮರವೇರಿದ ಮುಖ್ಯಶಿಕ್ಷಕರೊಬ್ಬರು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕರಳಮೋಳೆ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಜ್ಯೋತಿಗೌಡನಪುರ ಗ್ರಾಮದ ಮರಿಸ್ವಾಮಿ (52) ಮೃತಪಟ್ಟವರು. ಮರಿಸ್ವಾಮಿ ಅವರು ಕರಳಮೋಳೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

24/12/2016

## ಸೋಲಾರ್ ಹಗರಣದಲ್ಲಿ ನನ್ನ ಪಾತ್ರವಿಲ್ಲ: ನ್ಯಾಯಾಂಗ ಆಯೋಗಕ್ಕೆ ಚಾಂಡಿ ಹೇಳಿಕೆ

24/12/2016



ಹೊಸದಿಲ್ಲಿಯಲ್ಲಿನ ನಡೆದ ಇವಿ ಎಕ್ಸ್‌ಪೊದಲ್ಲಿ ಸೌರ ಇಂಧನದ ಇ-ರಿಕ್ಷಾವನ್ನು ಲೋಹಿಯಾ ಆಟೊ ಕಂಪನಿಯ ಸಿಇಒ ಆಯುಷ್ ಉದ್ಘಾಟಿಸಿದರು.